# ಸಿ/ಸಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸಕಲೇಶಪುರ

ಉಪಸ್ಥಿತರುಃ
**ಶ್ರೀ ಲಕ್ಷ್ಮೀ ನರಸಿಂಹ ಆರ್.ವಿ,**
ಬಿ.ಎ.ಎಲ್., ಎಲ್.ಎಲ್.ಬಿ.,
ಸಿ/ಸಿ ಸಿವಿಲ್ ಜಡ್ಜ್ ಮತ್ತು ಜೆ.ಮ್.ಎಫ್.ಸಿ, ಸಕಲೇಶಪುರ.

## ಸಿ.ಸಿ.ನಂ.712/2024

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಸಕಲೇಶಪುರ ಗ್ರಾಮಾಂತರ ಪೋಲೀಸ್ ರಿಂದ.

ವಿರುದ್ಧ

ಆರೋಪಿತರು : : ರಂಗ ಬಿನ್ ನಂಜೇಗೌಡ,
ವಯಸ್ಸು 58 ವರ್ಷ,
ವಾಸಃ- ಗಾಂಧಿ ಸರ್ಕಲ್, ಚನ್ನರಾಯಪಟ್ಟಣ,
ಹಾಸನ ಜಿಲ್ಲೆ.

## ದೋಷಾರೋಪಣೆ

ನಾನು ಲಕ್ಷ್ಮೀ ನರಸಿಂಹ ಆರ್.ವಿ, ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸಕಲೇಶಪುರ, ಈ ಮೂಲಕ ಆರೋಪಿಯಾದ ಇವರ ಮೇಲೆ ಮಾಡಿದ ದೋಷಾರೋಪಣೆ ಏನೆಂದರೆ.

ದಿನಾಂಕ 01.05.2024 ರಂದು ಚಾಸಾ-1 ರವರು ಬೆಂಗಳೂರಿನಿಂದ ಮಂಗಳೂರಿಗೆ ಹೋಗಲು ತನ್ನ ಬಾಬ್ತು ಕೆಎ-05 ಎನ್.ಎಫ್3166 ರ ಕಾರಿನಲ್ಲಿ ಚಾಲಕರಾಗಿ ತನ್ನ ಪತಿ ಚಾಸಾ-2 ರವರೊಂದಿಗೆ ಮಗಳು ಚಾಸಾ-3 ರವರನ್ನು ಕರೆದುಕೊಂಡು ಹಾಸನ-ಸಕಲೇಶಪುರ ಮಾರ್ಗವಾಗಿ ಮಂಗಳೂರಿಗೆ ಬರುತ್ತಿರುವಾಗ ಸಕಲೇಶಪುರದಿಂದ ರಾಷ್ಟ್ರೀಯ ಹೆದ್ದಾರಿ 75 ರ ಹೆಗ್ಗದ್ದೆ ಸಮೀಪ ದೊಡ್ಡ ತಪ್ಪಲು ಹತ್ತಿರಕ್ಕೆ ಮಧ್ಯಾಹ್ನ 3.00 ಗಂಟೆಗೆ ಬಂದಾಗ ಎದುರಿಗೆ ಬಂದ ಆರೋಪಿಯು ಕೆಎ-13-ಎಫ್-2333 ರ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅತಿವೇಗವಾಗಿ ಮತ್ತು ಆಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಡಿಕ್ಕಿಪಡಿಸಿದ ಪರಿಣಾಮ ಚಾಸಾ-1 ರಿಂದ ಚಾಸಾ-3 ರವರಿಗೆ ಯಾವುದೇ ಚಿಕಿತ್ಸೆಯನ್ನು ಪಡೆಯುವಂತಹ ಗಾಯಗಳಾಗದೆ ಇದ್ದು ಎರಡು ವಾಹನಗಳಿಗೆ ಬಲಭಾಗದ ಹತ್ತಿರ ಜಖಂಗೊಂಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 279 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

[ಈ ದೋಷಾರೋಪಣೆಯನ್ನು ಈ ದಿನ ದಿನಾಂಕ 02.11.2024 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.

ಸಿ/ಸಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ,
ಸಕಲೇಶಪುರ
ಸಿ.ಸಿ.ಸಂಖ್ಯೆ 712/2024

ಪಿರ್ಯಾದುದಾರರು : ಸಕಲೇಶಪುರ ಗ್ರಾಮಾಂತರ ಪೊಲೀಸ್

ವಿರುದ್ಧ

ಆರೋಪಿ : ರಂಗ ಬಿನ್ ನಂಜೇಗೌಡ,

**1. ಪ್ರಶ್ನೆ : ಈಗ ನಿಮಗೆ ಕನ್ನಡದಲ್ಲಿ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?**
**ಉತ್ತರ :**

**2. ಪ್ರಶ್ನೆ : ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?**
**ಉತ್ತರ :**

**ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.**

**ಸಿ/ಸಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಕಲೇಶಪುರ.**